**ದಿನಾಂಕಃ 18.11.2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – ಶ್ರೀ ಎಸ್ ಎಸ್ ಬಿ ವಕೀಲರಿಂದ**

ನಿಪಿ–2 ಅರ್ಜಿಯಲ್ಲಿ ಎರಡು ಸ್ವತ್ತುಗಳ ಮೇಲೆ ಕಟ್ಟಡ ನಿರ್ಮಾಣ ಮಾಡದಂತೆ ಆದೇಶ ಕೋರಿರುತ್ತೇನೆ. ದಾವಾ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಸ್ವಾಧೀನದಲ್ಲಿರುತ್ತೇನೆಂದು ನಾನು ದಾವೆಯಲ್ಲಿ ಬರೆಸಿರುತ್ತೇನೆಂದರೆ ಸರಿ. ಸದರಿ ಒಟ್ಟು ಕುಟುಂಬದ ಸದಸ್ಯರನ್ನು ಈ ಅರ್ಜಿಯಲ್ಲಿ ನಾನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ದಾವಾಸ್ತಿಯಲ್ಲಿ 2 ನೇ ಎದುರುದಾರ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾನೆಂದು ತೋರಿಸಲು ನಾನು ಭಾವಚಿತ್ರ ಹಾಜರು ಪಡಿಸಿರುತ್ತೇನೆ. ನಾನು ಬೇರಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ–8 ರಿಂದ ನಿಪಿ–17 ಭಾವಚಿತ್ರಗಳನ್ನು ಮೊಬೈಲ್ನಲ್ಲಿ ಸೆರೆಹಿಡಿಯಲಾಗಿದೆ. ಆ ಸಂಬಂಧ ನಾನು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ–18 ರಿಂದ ನಿಪಿ–22 ಸಿಡಿಗಳನ್ನು ಮಾಡಿಕೊಟ್ಟವರಿಂದ ನಾನು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಹಾಜರು ಪಡಿಸಿಲ್ಲ ಎಂದರೆ ಸರಿ. ನಿಪಿ–8 ರಿಂದ ನಿಪಿ–17 ಭಾವಚಿತ್ರಗಳು ದಾವಾ ಸ್ವತ್ತಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಿಪಿ–8 ರಿಂದ ನಿಪಿ–17 ಭಾವಚಿತ್ರಗಳನ್ನು ಈ ದಾವೆಗಾಗಿ ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ–3, ನಿಪಿ–4 ಅರ್ಜಿಗಳನ್ನು ನ್ಯಾಯಾಲಯದ ಮಧ್ಯಂತರ ಆದೇಶವಾದ ನಂತರ ನೀಡಿರುತ್ತೇನೆಂದರೆ ಸರಿ. ದಾವೆ ಹೂಡಿದ ಸಮಯದಲ್ಲಿ ನಾನು ಪೋಲಿಸರಲ್ಲಿ ದೂರು ದಾಖಲಿಸಲು ಪ್ರಯತ್ನಿಸಿರುತ್ತೇನೆ, ಆದರೆ ಪೋಲಿಸರು ಸ್ವೀಕರಿಸಿರುವುದಿಲ್ಲ. ಸದರಿ ಸಂಗತಿಯನ್ನು ನಾನು ನನ್ನ ವಾದ ಪತ್ರ ಹಾಗೂ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಮಧ್ಯಂತರ ಅರ್ಜಿ ಸಂಃ 2 ರಲ್ಲಿ ನಿಖರವಾಗಿ ದಾವಾ ಸ್ವತ್ತಿನ ಯಾವ ಭಾಗದಲ್ಲಿ 2 ನೇ ಪ್ರತಿವಾದಿ ಕಟ್ಟಡ ನಿರ್ಮಾಣ ಮಾಡುತ್ತಿರುತ್ತಾನೆಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಓ ಎಸ್ 268/2014 ರಲ್ಲಿ ಪ್ರತಿವಾದಿ 4

ರವರಿಗೆ ನ್ಯಾಯಾಲಯದ ನೋಟಿಸ್ ಜಾರಿಯಾದರೂ ಆತ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿ. ನಾನು ಸದರಿ 4 ನೇ ಎದುರುದಾರರೊಂದಿಗೆ ವಿಶ್ವಾಸದಿಂದಿರುತ್ತೇನೆಂದರೆ ಸರಿ. 4 ನೇ ಎದುರುದಾರರೊಂದಿಗೆ ನಾನು ಶಾಮೀಲಾಗಿ ಈ ದಾವೆ ಹೂಡಿರುತ್ತೇನೆಂದರೆ ಸರಿಯಲ್ಲ. ನಾವು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಃ 2 ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ವಜಾಗೊಂಡಿರುತ್ತದೆ ಎಂದರೆ ಸರಿ. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಹೊರತು ಪಡಿಸಿ ವಿವಾದಿತ ವಿಷಯದ ಸಂಬಂಧ ನನ್ನ ಬಳಿ ಬೇರಾವುದೇ ದಾಖಲೆ ಇಲ್ಲ ಎಂದರೆ ಸರಿ. ನನ್ನ ಅರ್ಜಿಯಲ್ಲಿ ಗುತ್ತಿಗೆದಾರರ ವಿವರ ಇಲ್ಲ ಎಂದರೆ ಸರಿ. ಎದುರುದಾರರು ನಮ್ಮೊಂದಿಗೆ ಜಗಳ ಮಾಡಿಲ್ಲ ಎಂದರೆ ಸರಿಯಲ್ಲ. ನಮಗೆ ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಲು ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಎದುರುದಾರರು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಯಾವುದೇ ಕಟ್ಟಡ ನಿರ್ಮಾಣ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಹಾಗೂ ನನ್ನ ಸಹೋದರ ಎದುರುದಾರರು ಅಕ್ರಮ ಕಟ್ಟಡ ನಿರ್ಮಾಣ ಮಾಡುತ್ತಿದ್ದುದ್ದನ್ನು ಖುದ್ದು ನೋಡಿರುತ್ತೇನೆಂದು ನುಡಿಯುತ್ತಾರೆ. ನಾನು ಯಾವುದೇ ಇಲಾಖೆಗೂ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ನಮ್ಮ ಕುಟುಂಬದ ಸದಸ್ಯರನ್ನು ಈ ಅರ್ಜಿಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಟಿ. ಶ್ರೀಕಾಂತ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.